**ಟ್ರೇನರ್‌ನ ಕಮಾಂಡಿಂಗ್ ವಾಯ್ಸ್ ಭೈರನಿಗೆ ಸ್ವಲ್ಪವೂ ಪಥ್ಯವಾಗಲಿಲ್ಲ. ಅವನನ್ನು ಒಲಿಸಿಕೊಳ್ಳಲು ತರಬೇತುದಾರನ ಕಡೆಯಿಂದ ಆದ ಯಾವ ಪ್ರಯತ್ನವೂ ಯಶಸ್ವಿಯಾದಂತೆ ಕಾಣಲಿಲ್ಲ.**



ಅಸೂಯೆ ಮೂಡಿತ್ತು. ಒಂದೆರಡು ನಾಯಿಗಳು ಗೇಟಿನ ಬಳಿಯೇ ಹೊರಭಾಗದಲ್ಲಿ ಕುಳಿತು ತಮಾಷೆ ನೋಡುತ್ತಿದ್ದವು. ಭೈರ ಅವಮಾನದಿಂದ ಕುದಿಯುತ್ತಿದ್ದ. ಟ್ರೇನರ್ ಮೇಲಿನ ಸಿಟ್ಟನ್ನು ಅವುಗಳಿಗೆ ಬೊಗಳಿ ತೀರಿಸಿಕೊಳ್ಳುತ್ತಿದ್ದ.

ಹಸನಾಗಬೇಕಿದ್ದ ತರಬೇತಿ ಪ್ರಹಸನವಾಗಿತ್ತು. ಈಗಾಗಲೇ ವಿಭಿನ್ನ ಗುರುಗಳಿಂದ ಟ್ರೇನ್ ಅಪ್ ಆದ ಅಕ್ಕಪಕ್ಕದ ಮನೆಯ ಸರ್ಟಿಫೈಡ್ ಶ್ವಾನಗಳು ಈ ಒಂದು ವಿಚಿತ್ರ ಸನ್ನಿವೇಶಕ್ಕೆ ಬೆರಗಾಗಿ ಅವರವರ ಮನೆಯ ಬಾಲ್ಕನಿಯಿಂದ ಬಗ್ಗಿ ನೋಡುತ್ತಿದ್ದವು. ರೆಗ್ಯುಲರ್ ಸಿಲೆಬಸ್‌ಗೆ ಏನಾದರೂ ಮಾಡಿಫಿಕೇಶನ್ ಆಗಿರಬಹುದೇ ಎಂದು ಮೊದಮೊದಲು ಕುತೂಹಲದಿಂದ ಕಣ್ಣರಳಿಸುತ್ತಿದ್ದ ಆ ಹಳೆಯ ವಿದ್ಯಾರ್ಥಿಗಳು ನಂತರ ಅದೇ ಮಾಮೂಲು ಪಠ್ಯ ಎಂದರಿತು ಆಸಕ್ತಿ ಕಳೆದುಕೊಂಡವು. ಗುರುವನ್ನೇ ಕುಣಿಸುತ್ತಿದ್ದ ಭೈರನನ್ನು ಕಂಡು ಟ್ರೈನಿಂಗ್ ಪಿರಿಯಡ್‌ನಲ್ಲಿ ತಾವೆಷ್ಟು ವಿಧೇಯರಿದ್ದೆವೆಂದು ನೆನೆಯುತ್ತಾ ಒಳಹೋದವು.

ಅಂದು ಅಡುಗೆಮನೆಯಲ್ಲಿ ಟ್ರೇನರ್‌ಗಾಗಿ ಟೀ ಮಾಡುತ್ತಿದ್ದವಳು, ಭೈರನ ಆರ್ತನಾದ ಕೇಳಿ ಬೆಚ್ಚಿ ಹೊರಬಂದೆ. ತಿಂಗಳಾದರೂ ಏನೂ ಕಲಿಯದ ಭೈರನೆಡೆಗೆ ತಾಳ್ಮೆ ಕಳೆದುಕೊಂಡ ತರಬೇತುದಾರ ಅವನಿಗೆ ಚೆನ್ನಾಗಿ ಬಾರಿಸಿದ್ದ. ಬರೀ ಪ್ಯಾಂಪರ್ ಮಾಡಿಸಿಕೊಂಡು ಗೊತ್ತಿದ್ದ ಭೈರ ಮೊದಲ ಬಾರಿಗೆ ರುಬ್ಬಿಸಿಕೊಂಡು ಆಘಾತಗೊಂಡಿದ್ದ. ಅವನ ಅಸಹಾಯಕ ನೋಟದಿಂದ ನನ್ನ ಕರುಳು ಚುರುಕ್ ಎಂದಿತು.

ಟ್ರೈನರ್‌ಗೆ ಟೀ ನೀಡುತ್ತಾ, 'ಹೊಡೀದೆ ಟ್ರೇನ್ ಮಾಡಿ, ಇನ್ನೂ ಅವ್ನು ಬಹಳ ಚಿಕ್ಕವನು. ರಿವಾರ್ಡ್ ಬೇಸ್ಡ್ ಟ್ರೇನಿಂಗ್ ಕೊಡಿ, ಪನಿಷ್ ಮಾಡ್ಬೇಡಿ...' ಎಂದೆ. ನನ್ನ ಆಗಮನದಿಂದ ಉತ್ತೇಜನಗೊಂಡ ಭೈರ ಪುನಃ ಅಶಿಸ್ತಿನಿಂದ ಓಡಾಡತೊಡಗಿದ. ನನ್ನನ್ನು ಕೆಕ್ಕರಿಸುತ್ತಲೇ ನೋಡಿದ ತರಬೇತುದಾರ ಅತ್ತ ತಿರುಗಿ ಕರ್ಕಶವಾಗಿ 'ಸ್ಟೇ... ಸ್ಟೇ...' ಎಂದಾಗ ಭೈರನ ತಲೆ ಸವರುವ ಬಯಕೆಯಿದ್ದರೂ ಬೆಚ್ಚಿ ಒಳ ಬಂದೆ. ಅಂದು ಒಂದು ಗಂಟೆಯ ಪಾಠ ಮುಗಿಸಿ ಟ್ರೇನರ್ ಹೊರಟುಹೋದ ನಂತರ ಭೈರ ಅದೇ ದಿಕ್ಕನ್ನು ನೋಡುತ್ತಾ ಒಂದು ಗಂಟೆ ಕಾಲ ಶಕ್ತಿಮೀರಿ ಬೊಗಳಿ ತನ್ನ ಸೇಡು ತೀರಿಸಿಕೊಂಡ. ಅವನ ಅಷ್ಟು ದಿನಗಳ ಅಸಮಾಧಾನ ಎಗ್ಗಿಲ್ಲದೆ ಹೊರಬಂದಿತ್ತು. ಭೈರನ ರೋಷ ಕಂಡು ಬೀದಿ ನಾಯಿಗಳು ದಿಕ್ಕಾಪಾಲಾಗಿ ಓಡಿದವು.

ಅಂದಿನಿಂದ ಪ್ರತಿದಿನ ಟ್ರೇನರ್ ಬರುವ ಸಮಯಕ್ಕೆ ಸರಿಯಾಗಿ ಭೈರ ಮಂಕಾಗುತ್ತಿದ್ದ. ಇತ್ತೀಚೆಗೆ ಟ್ರೇನರ್ ಫೋಬಿಯಾದಿಂದ ಅವನ ಊಟ, ಚೇಷ್ಟೆ ಎಲ್ಲಾ ಕಡಿಮೆಯಾಗಿತ್ತು. ಪ್ರಾರಂಭದ ದಿನಗಳಲ್ಲಿ ಶಾಲೆಗೆ ಹೊರಡಲು ನರ್ಸರಿ ಮಗು ರಚ್ಚೆ ಹಿಡಿಯುವಂತೆ ಅವನು ಬಂದ ಕೂಡಲೇ ಇವನು ಒಳಬಂದು ಸೋಫಾ ಅಡಿ ಕುಳಿತು ಹೊರ ಬರುವುದಿಲ್ಲವೆಂದು ಸ್ಟ್ರೈಕ್ ಮಾಡುತ್ತಿದ್ದ. ಎಂದಿನಂತೆ ಯಾವ ಸಿಟ್, ಅಪ್, ಡೌನ್, ಸ್ಟೇಗಳಿಗೂ ಭೈರ ಪ್ರತಿಕ್ರಿಯಿಸುತ್ತಿರಲಿಲ್ಲ. ಕೊನೆಗೆ ಟ್ರೇನರ್ ನೀಡುವ ಬಿಸ್ಕೆಟ್ ಪೆಡಿಗ್ರೀಗೂ ಬಾಯಿ ಹಾಕದೆ ಮುಖ ತಿರುಗಿಸಿ ಕುಳಿತ.

ಬೀದಿ ನಾಯಿಗಳು ಮಾತ್ರ, ಪ್ರವಚನ ಕೇಳಲು ಉತ್ಸುಕರಾದ ಭಕ್ತಾದಿಗಳಂತೆ ಸರಿಯಾದ ಸಮಯಕ್ಕೆ ಶ್ರದ್ಧೆಯಿಂದ ಗೇಟಿನ ಬಳಿ ಹಾಜರಾಗುತ್ತಿದ್ದವು. ಅಲ್ಲೇ ಸಿಟ್–ಸ್ಟ್ಯಾಂಡ್, ಅಪ್–ಡೌನ್ ಮಾಡುತ್ತಾ ತಮಗೇನಾದರೂ ರಿವಾರ್ಡ್ ಸಿಗಬಹುದಾ ಎಂದು ಆಸೆ ಕಂಗಳಿಂದ ಒಳಗೆ ದಿಟ್ಟಿಸುತ್ತಿದ್ದವು. ಕಲಿಕೆಯಲ್ಲಿ ಏಕಲವ್ಯನ ಪ್ರತೀಕದಂತಿದ್ದ ಅವುಗಳೆಡೆಗೆ ಟ್ರೇನರ್ ಮುಗುಳ್ನಗೆ ಬೀರುತ್ತಿದ್ದ. ಆ ದೃಶ್ಯ ಭೈರನನ್ನು ಮತ್ತೂ ಕೆರಳಿಸುತ್ತಿತ್ತು.

ಮೂರು ತಿಂಗಳ ನಂತರ ಹದಿನೈದು ಸಾವಿರ ಎಣಿಸಿಕೊಂಡ ಟ್ರೇನರ್ 'ನಿಮ್ಮ ನಾಯಿ ತುಂಬಾ ಸ್ಟಬ್ಬಾರ್ನ್ ಇದೆ. ನೀವು ಹೊಡೆಯಲೂ ಬಿಡುವುದಿಲ್ಲ. ಇದಕ್ಕೆ ಏನೂ ಕಲ್ಸೋಕಾಗಲ್ಲ... ಮ್ಯಾನ್ಯುಫ್ಯಾಕ್ಚರಿಂಗ್ ಡಿಫೆಕ್ಟ್...' ಎನ್ನುತ್ತಾ ಭೈರನಿಗೆ ನಪಾಸಿನ ಪ್ರಮಾಣಪತ್ರ ನೀಡಿ ಹೊರಟ. ಅಂತೂ ಭೈರನ ತರಬೇತಿಯ ತ್ರಾಸಾಯಣ ನೀರಸ ಅಂತ್ಯ ಕಂಡಿತ್ತು. ಭೈರ ನೆಮ್ಮದಿಯ ನಿಟ್ಟುಸಿರಿಟ್ಟ.

ನಮ್ಮ ಮಾರ್ಚ್‌ಪಾಸ್ಟ್ ಕನಸು ಮಾರ್ಚ್‌ಬ್ಯಾಕ್ ಆಗಿತ್ತು. ವಿಶೇಷವೆಂದರೆ ಈ ಮೂರು ತಿಂಗಳಿನಲ್ಲಿ ತರಬೇತುದಾರ ಒಮ್ಮೆಯೂ ಟ್ರೇನಿಂಗ್‌ನಲ್ಲಿ ಸಾಮಾನ್ಯವಾಗಿ ಬಳಸುವ 'ಕಮ್' ಹಾಗೂ 'ಗುಡ್' ಪದವನ್ನು ಬಳಸಲಿಲ್ಲ. ಮೊದಲ ಪದಕ್ಕೆ ಆಸ್ಪದವೇ ಇಲ್ಲದಂತೆ ಭೈರ ಯಾವಾಗಲೂ ಮುಂದಕ್ಕೆ ಎಗರುತ್ತಿದ್ದ. ಇನ್ನು, ಗುಡ್ ಎನ್ನುವ ಯಾವ ಘನ ಕಾರ್ಯವೂ ಬೈರನ ಕಡೆಯಿಂದ ಜರುಗಿರಲಿಲ್ಲ.

ತರಬೇತುದಾರನಿಗೆ ಹಣ ಎಣಿಸಿಕೊಟ್ಟ ಇವರು ಒಳ ಬರುತ್ತಾ – 'ಬೀದಿ ನಾಯಿಗಳೆಲ್ಲಾ ಸಿಟ್, ಸ್ಟ್ಯಾಂಡ್, ಶೇಕ್ ಹ್ಯಾಂಡ್ ಎಲ್ಲಾ ಕಲಿತಂತಿವೆ. ನಾವು ಟ್ರೇನರ್‌ಗೆ ಕೊಟ್ಟ ಹಣ ಈ ರೀತಿಯಲ್ಲಾದರೂ ಉಪಯೋಗವಾಯಿತಲ್ಲ...' ಎಂದು ವ್ಯಂಗ್ಯ ನಗು ಬೀರಿದಾಗ, ಅಲ್ಲೇ ಹೋಂವರ್ಕ್ ಮಾಡುತ್ತಿದ್ದ ಮಗ, 'ಪಪ್ಪಾ... ಭೈರ ಕಲೀದೆ ಇರೋದು ನಿಮ್ಮ ಟ್ರೇನರ್ ಫೇಲ್ಯೂರ್ ಅಷ್ಟೇ, ನೀವು ಫುಲ್ ಅಮೌಂಟ್ ಕೊಡ್ಬಾರ್ದಿತ್ತು... ಎಲ್ಲಾ ಸ್ಟೂಡೆಂಟ್ಸು ಒಂದೇ ತರ ಇರಲ್ಲ...' ಎಂದ.

'ಹೌದು... ಪ್ರತಿಕೂಲ ಪರಿಸ್ಥಿತಿಯಲ್ಲೂ ಹಡಗಿನ ಚುಕ್ಕಾಣಿ ಹಿಡಿದು ಮುನ್ನಡೆಸುವವನೇ ನಿಜವಾದ ನಾವಿಕ... ಆ ಕೋನದಿಂದ ಯೋಚಿಸಿದರೆ ನಿಮ್ಮ ಟ್ರೇನರ್ ಅಟ್ಟರ್ ಫೇಲ್ಯೂರ್... ಅವನು ಭೈರನಿಗೆ ಕಲಿಸಿರೋದು ಸ್ಟೇ... ಅನ್ನೋ ಒಂದೇ ಪದ! ಭೈರನ ಡಿಕ್ಷನರೀಲಿ ಸ್ಟೇ ಅಂದ್ರೆ ಟ್ರೇನರ್ ಅಂತ ಪ್ರಿಂಟಾಗಿದೆ. ಅದಕ್ಕೇ ಸ್ಟೇ... ಅಂದ ಕೂಡ್ಲೇ ಬೊಗಳ್ತಾನೆ. ಅದೊಂದು ಪದ ಕಲಿಸೋಕೆ ಹದಿನೈದು ಸಾವಿರ...' ಎಂದೆ ನಗುತ್ತಾ. ಅಲ್ಲೇ ಸೋಫಾದಲ್ಲಿ ಕುಳಿತು ತೂಕಡಿಸುತ್ತಿದ್ದ ಭೈರ ಸ್ಟೇ... ಎಂಬ ಪದ ಕೇಳಿ ಕರ್ಕಶವಾಗಿ ಬೊಗಳಿದ.

ಪ್ರತಿಕ್ರಿಯಿಸಿ: feedback@sudha.co.in